ತೀರ್ಮಾನ ಕೈಗೊಳ್ಳುವ ಬಗ್ಗೆ ತನ್ನ ಆಶಯವನ್ನು ವ್ಯಕ್ತಪಡಿಸಿದೆ. ಹಾಗೆಯೇ ಸರ್ಕಾರಿ ನೌಕರರು ಶಿಸ್ತು, ಸಂಯಮ ಹಾಗೂ ಆದರ್ಶ ರೀತಿಯಲ್ಲಿ ಜನತೆಯ ಸೇವೆ ಸಲ್ಲಿಸಬೇಕೆಂಬುದು ಸರ್ಕಾರದ ಅಪೇಕ್ಷೆ. ಸರ್ಕಾರಿ ನೌಕರರು ತಮ್ಮ ಬೇಡಿಕೆಗಳನ್ನು ಶಾಂತ ರೀತಿಯಲ್ಲಿ ತೀರ್ಮಾನಿಸಿಕೊಳ್ಳಲು ಪ್ರಯತ್ನಿಸುವರೆಂದು ಸಾರ್ವಜನಿಕರು ನಿರೀಕ್ಷಿಸುವುದು ಸಹಜ.

43. ಹಿಂದಿನ ಅಧಿವೇಶನದಲ್ಲಿ ನಿಮ್ಮ ಮುಂದೆ ಕೆಲವು ವಿಧೇಯಕಗಳನ್ನು ಮಂಡಿಸಲಾಗಿತ್ತು. ಇವುಗಳ ಪೈಕಿ ಕೆಲವು ವಿಧೇಯಕಗಳು ಸದನ ಒಪ್ಪಿಗೆ ಪಡೆದು ಅಧಿನಿಯಮಗಳಾಗಿವೆ. ಕಾಲಾವಕಾಶದ ಅಭಾವದಿಂದ ಉಳಿದ ವಿಧೇಯಕಗಳ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಅವನ್ನು ನಿಮ್ಮ ಮುಂದೆ ಈಗ ಮಂಡಿಸಲಾಗುವುದು. ವಿಧಾನ ಮಂಡಲದ ಹಿಂದಿನ ಅಧಿವೇಶನದ ತರುವಾಯ ಪ್ರಖ್ಯಾಪಿಸಲಾದ ಅಧ್ಯಾದೇಶಗಳ ಬದಲಾಗಿ ಮಂಡಿಸಬೇಕಾದ ವಿಧೇಯಕಗಳೂ ಸೇರಿ ಕೆಲವು ಹೊಸ ವಿಧೇಯಕಗಳನ್ನು ಪ್ರಸಕ್ತ ಅಧಿವೇಶನದಲ್ಲಿ ನಿಮ್ಮ ಮುಂದೆ ಮಂಡಿಸಲಾಗುವುದು.

44. ನಿಮ್ಮ ಸಕಲ ಪ್ರಯತ್ನಗಳಲ್ಲಿ ನಿಮಗೆ ಯಶಸ್ಸು ಲಭಿಸಲಿ ಎಂದು ಹಾರೈಸುತ್ತೇನೆ.

"ಜೈ–ಹಿಂದ್"

Obituary Reference

MR. SPEAKER.—I regret to make a reference to the demise of Sri K. Venkataramaiah a sitting member of this House and Sri D. Rajagopal member of the Legislative Council and the following former members who have expired after the adjournment of the last Session.—

1. Sri K. Venkataramaiah, expired on 20-1-1982. He was elected to the Sixth Assembly from Hosadurga Constituency. He took part in the Freedom Movement, Quit India Movement, Railway agitation, and was imprisoned several time. He was a member of the M.P.C.C. and awarded Tamra patra. He was an agriculturist by profession and worked for the upliftment of Harijans and Girijans.

2. Sri D. Rajagopal, expired on 2-1-1982. He was elected to the Legislative Council for 3 times i.e., during 1964, 1970 and 1976. He was a labour leader and was associated with many organisations and was a good Parliamentarian.

3. Sri H. R. T. Rajgopal Mudaliar a member of the Mysore Representative Assembly during the period 1945-49, expired on 24-8-1981.

4. Sri K.L. Narasimhaiah, a member of the Legislative Assembly during the period from 1957-62, expired on 6-8-1981.

5. Sri B.D. Naik a member of the Legislative Assembly during the period from 1957-1962, expired on 26-8-1981.

6. Sri P.M. Swami Dorai a member of the Legislative Assembly during the period 1952-57, expired on 30-8-1981.

7. Sri B. Channabyre Gowda, a member of Representative Assembly between 1945–49, Member of the Constituent Assembly during 1950–51, and a member of Legislative Assembly during the period 1962–67. He was also a member of the Legislative Council during the period 1968-1974, expired on 6-9-1981.

8. Sri K. Siddaiah a member of the Mysore Representative Assembly during the period 1941–45, expired on 27-9-1981.

9. Dr. A.R. Karisiddappa a member of Legislative Assembly during the period 1957-62, expired on 23-11-1981.

10. Sri R Muniswamaiah, a member of Legislative Assembly for two terms between 1962, to 67 and 1967 to 71, expired on 28-11-1981.

11. Sri B.C. Nanjundaiya a member of the Mysore Representative Assembly during the period 1941 to 45, and a member of the Constituent Assembly during 1949–50 and Member of Legislative Assembly between 1950–52 expired on 10-12-1981.

ಶ್ರೀ ಎಂ. ವೀರಪ್ಪಮೊಯಿಲಿ (ಹಣಕಾಸು ಮತ್ತು ಪ್ರವಾಸೋದ್ಯಮ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದ ಮತ್ತು ವಿಧಾನ ಪರಿಷತ್‌ನ ಹಾಲಿ ಮತ್ತು ಮಾಜಿ ಸದಸ್ಯರು ನಿಧನರಾದ ಬಗ್ಗೆ ಶೋಕಸೂಚನೆಯನ್ನು ಇವತ್ತು ಈ ಸಭೆಯು ಮುಂದೆ ಇಟ್ಟಾಗ, ನಿಧನರಾದ ಮಹನೀಯರು ದೇಶಕ್ಕಾಗಿ ಮತ್ತು ಕರ್ನಾಟಕ ರಾಜ್ಯದ ಬಗ್ಗೆ ಸಾಕಷ್ಟು ಪರಿಶ್ರಮವನ್ನು, ಪ್ರಮಾಣಿಕವಾದ ಸೇವೆಯನ್ನು ಕೂಡ ಮಾಡಿದಂತಹ ಮಹನೀಯರಾಗಿದ್ದಾರೆ. ಶ್ರೀಮಾನ್ ಕೆ. ಮೊಕಚಿರಾಮಯ್ಯನವರು ಕಳೆದಬಾರಿ ಈ ಸದನದಲ್ಲಿ ಅನೇಕ ವಿಚಾರಗಳ ಬಗ್ಗೆ ಬಹಳ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಂತಹ ಮಹಾನುಭಾವ. ಅವರು ಸ್ವಾತಂತ್ರ್ಯ ಹೋರಾಟಗಾರರು ಹೌದು. ಹಿಂದುಳಿದ ವರ್ಗದಿಂದ ಬಂದಂತಹ ಶ್ರೀಮಾನ್ ಮೊಕರಾಮಯ್ಯನವರು ಆ ಜನಾಂಗದ ಮತ್ತು ಹಿಂದುಳಿದ ವರ್ಗದ ಬಗ್ಗೆ ಅನೇಕ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಹೊಸದುರ್ಗ, ತುಮಕೂರು ಮತ್ತು ಬೆಂಗಳೂರಿನಲ್ಲಿ ಅನೇಕ ಹಾಸ್ಟಲ್‌ಗಳನ್ನು ಸ್ಥಾಪನೆಮಾಡಲು ಕಾರಣಭೂತರಾಗಿದ್ದಾರೆ. ಅವರು ವಯಸ್ಸು ೭೦ ಆಗಿದ್ದರೂ ಕೂಡ ಈ ಸದನದಲ್ಲಿ ಬಹಳ ಚಟುವಟಿಕೆಯಿಂದ ಇದ್ದಂತಹ ವ್ಯಕ್ತಿ. ಸರಳಜೀವಿಯಾದ ಅವರು ಯಾವಾಗಲೂ ಚಟುವಟಿಕೆಯಿಂದ ಕೂಡಿ ಸ್ವಾತಂತ್ರ್ಯ ಹೋರಾಟ ಪ್ರಭಾವನ್ನು ಉಳಿಸಿಕೊಂಡು ಪ್ರಾಮಾಣಿಕದಾಜಂತಹ ಸೇವೆಯನ್ನು ಈ ಸದನದ ಒಳಗೂ ಮತ್ತು ಹೊರಗೂ ಮಾಡಿದಂತಹ ಮಹಾನ್‌ವ್ಯಕ್ತಿ. ಹಿರಿಯರು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಪಂಕ್ತಿಯಲ್ಲಿ ಉಳಿದುಕೊಂಡು ಆದರ್ಶವನ್ನು ಕೊಟ್ಟಂತಹ ಮಹಾನುಭಾವನನ್ನು ನಾವು ಕಳೆದುಕೊಂಡಿದ್ದಕ್ಕೆ ನಮಗೆ ಅತ್ಯಂತ ವ್ಯಸನವಾಗುತ್ತಿದೆ.

ಶ್ರೀಮಾನ್ ಡಿ. ರಾಜಗೋಪಾಲ್‌ರವರು ನನಗೆ ಸುಮಾರು ೧೦ ವರ್ಷಗಳಿಂದ ವೈಯಕ್ತಿಕವಾಗಿ ಪರಿಚಯವಿದೆ. ಮಾನ್ಯ ಅಧ್ಯಕ್ಷರಿಗೆ ಸಮಗ್ರವಾದ ಹೆಚ್ಚಿನ ಪರಿಚಯವಿದೆ. ಪ್ರಗತಿಪರವಾದ ಯೋಜನೆಗಳನ್ನು ಶಾಸನಗಳಲ್ಲಿ ತರುವುದರ ಬಗ್ಗೆ ಅವರು ನಾವು ಈ ಸದನದಲ್ಲಿ ಮತ್ತು ಪಕ್ಷದಲ್ಲಿ ಜೊತೆಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇನೆ ಅವರ ಪರಿಚಯ ಮತ್ತು ಅನುಭವ ನಮಗೆ ಗೊತ್ತಿದೆ ಇಷ್ಟು ಮಾತ್ರವಲ್ಲದೆ ಅವರು ಹಿರಿಯ ರಾಜಕಾರಣಿಯಾಗಿದ್ದರು. ಇವರು ಕಾರ್ಮಿಕ ಕ್ಷೇತ್ರದಲ್ಲಿ ಕೂಡ ತಮ್ಮದೇ ಆದಂಥ ಸ್ವಂತ ಪ್ರಭಾವನ್ನು ಬೆಳೆಸಿಕೊಂಡು ಬಂದಿದ್ದರು ಅದು ಮಾತ್ರವಲ್ಲದೆ ತಮ್ಮ ಅನೇಕ ರೀತಿಯ ಅನುಭವಗಳಿಂದ ಕಾರ್ಮಿಕ ಕ್ಷೇತ್ರಕ್ಕೆ ತಮ್ಮದೇ ಆದಂಥ ಬೃಹತ್ ಕೊಡಗೆಯನ್ನು ಕೊಟ್ಟಿದ್ದಾರೆ. ಯಾವಾಗಲೂ ಹುಟ್ಟು ಹೋರಾಟಗಾರರಾಗಿದ್ದಂಥ ಮಾನ್ಯ ರಾಜಗೋಪಾಲ್ ಅವರು ತಾವು ನಂಬಿಕೊಂಡಿದ್ದ ನಿಷ್ಠೆ ಅಥವಾ ತತ್ವಕ್ಕಾಗಿ ಬಂಡಾಯ ಎಂತಹದಲ್ಲಿಯಾದರೂ ಹೋರಾಟ ಮಾಡತಕ್ಕಂಥ ವರಾಗಿದ್ದರು, ಇಂತಹವರು ಕಾರ್ಮಿಕ ಕ್ಷೇತ್ರಕ್ಕೆ ತಮ್ಮ ಅಪಾರವಾದ ಕೊಡಗೆಯನ್ನು ಕೊಟ್ಟಿದ್ದು

ಮಾತ್ರವಲ್ಲದೆ ಸತತವಾಗಿ ಮೂರು ಸಲ ವಿಧಾನಪರಿಷತ್ತಿಗೆ ಆಯ್ಕೆಗೊಂಡು ಸೇವೆ ಸಲ್ಲಿಸುತ್ತಿದ್ದರು. ವಿಧಾನ ಪರಿಷತ್ತಿನಲ್ಲಿ ಕೂಡ ಅವರು ಯಾವಾಗಲೂ ಅನೇಕ ಒಳ್ಳೆಯ ವಿಚಾರಗಳನ್ನು ಪರಿಣಾಮಕಾರಿಯಾಗಿ ಮಂಡಿಸುತ್ತಿದ್ದರು. ಈ ರೀತಿ ತಮ್ಮ ಕೆಲಸವನ್ನು ಒಳ್ಳೆಯ ರೀತಿಯಿಂದ ಮಾಡಿಕೊಂಡು ಬಂದಂಥ ಶ್ರೀ ರಾಜಗೋಪಾಲ್ ಅವರನ್ನು ಕರ್ನಾಟಕ ರಾಜಕಲ್ಲಿರುವಂತಹ ಕಾರ್ಮಿಕರು ಮಾತ್ರವಲ್ಲದೆ ನಾವೆಲ್ಲರೂ ಕಳೆದುಕೊಂಡು ಶೋಕಭರಿತರಾಗಿದ್ದೇವೆ. ಇಂತಹ ಮಾನ್ಯರನ್ನು ಸ್ಮರಿಸುವುದು ಮತ್ತು, ಇವರು ಬಿಟ್ಟು ಹೋದಂಥ ಆದರ್ಶಗಳನ್ನು ಸ್ಮರಣೆಯಲ್ಲಿ ತಂದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಒಟ್ಟಿನಲ್ಲಿ ನಾವು ಹುಟ್ಟು ಹೋರಾಟಗಾರರೊಬ್ಬರನ್ನು ಹಾಗೂ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ,

ಇನ್ನು ಮಾನ್ಯ ಬೆನ್ನಚ್ಚೈರೇಗೌಡರು ಒಳ್ಳೆಯ ಆಕರ್ಷಕ ವ್ಯಕ್ತಿಯಾಗಿದ್ದರು. ಅವರು ಎಲ್ಲಿಯೇ ಹೋಗಲಿ ಎಲ್ಲಿಯೇ ಇರಲಿ, ಮೈಸೂರು ಪೇಟದಿಂದ ಅವರನ್ನು ಗುರುತು ಮಾಡಬಹುದಾಗಿತ್ತು. ಅವರು ಯಾವಾಗಲೂ ರೈತರ ಪರವಾಗಿದ್ದರು ಅವರು ಮರಣ ಹೊಂದುವ ಎರಡು ದಿವಸಗಳ ಹಿಂದೆ ಕೆಂಪೇಗೌಡ ಮೆಡಿಕಲ್ ಕಾಲೇಜ್ ಬಗ್ಗೆ ಮಾತನಾಡಲು ಬಂದಿದ್ದರು. ಅವರು ಯಾವುದೇ ಒಂದು ಸಮಸ್ಯೆಯನ್ನು ತೆಗೆದುಕೊಂಡರೂ ಕೂಡ ಆ ಬಗ್ಗೆ ಪ್ರಾಮಾಣಿಕವಾದಂಥ ಒಂದು ವಾದವನ್ನು ಮಾಡಿ ಆ ಸಮಸ್ಯೆಯನ್ನು ಪರಿಹಾರ ಮಾಡಲು ಪ್ರಯತ್ನ ಮಾಡುತ್ತಿದ್ದರು, ಇಂತಹ ಪ್ರಾಮಾಣಿಕ ರಾಜಕಾರಣಿಯೊಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ಇವರ ಜೊತೆಯಲ್ಲಿ ಇನ್ನೂ ಅನೇಕ ಹಿರಿಯನನ್ನು ನಾವು ಕಳೆದುಕೊಂಡಿದ್ದೇವೆ. ಅವರುಗಳ ಪೈಕಿ ಶ್ರೀ ಸಿ.ಕೆ. ಹನುಮಂತಯ್ಯನವರೂ ಸಹ ಒಬ್ಬರು. ಹೀಗೆ ಹಿರಿಯ ರಾಜಕಾರಣಿಗಳನ್ನು, ಸಮಾಜ ಸೇವಾಕರ್ತರನ್ನು ಕಳೆದುಕೊಂಡಿದ್ದಕ್ಕೆ ಕರ್ನಾಟಕ ರಾಜ್ಯದ ಜನರು ವ್ಯಥೆಪಟ್ಟಿದ್ದಾರೆ. ಇಂತಹವರನ್ನು ಸ್ಮರಿಸುವುದು ಮತ್ತು ಅವರ ಒಳ್ಳೆಯ ಕಾರ್ಯಗಳನ್ನು ಗುಣಗಾನ ಮಾಡುವುದು ನಮ್ಮ ಕರ್ತವ್ಯವಾಗಿದೆ. ಅಷ್ಟೇ ಅಲ್ಲ ಅವರ ಒಂದು ಒಳ್ಳೆಯತನ ಹಾಗೂ ನ್ಯಾಯಸಮ್ಮತ ಹೋರಾಟದ ಪ್ರವೃತ್ತಿ. ಮಿತ್ತು, ಅವನ್ನು ನಾವು ನಮ್ಮ ಸಮಾಜದಲ್ಲಿ ಬೆಳೆಯುವ ರೀತಿಯಲ್ಲಿ ನಡೆಸಿಕೊಂಡು ಹೋಗುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿ ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿದಂಥ ದುಃಖ ಸೂಚಕ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ತಾವು ಮತ್ತು ಮಾನ್ಯ ಆರ್ಥಿಕ ಮಂತ್ರಿಗಳು ವ್ಯಕ್ತ ಮಾಡಿದ ಭಾವನೆಗಳಲ್ಲಿ ನಾನೂ ಕೂಡ ಪಾಲುಗೊಳ್ಳುತ್ತೇನೆ ಶ್ರೀ ಕೆ. ಪೊಟರಾಮಯ್ಯನವರು ಈ ಸಭೆಯ ಸದಸ್ಯರಾಗಿದ್ದರು. ಇದರ ಜೊತೆಗೆ ಅವರು ಹಿರಿಯ ಸ್ವಾತಂತ್ರ್ಯಹೋರಾಟಗಾರರಾಗಿದ್ದರು ಅಲ್ಲದೆ ಈ ಸಮಾಜದಲ್ಲಿ ಅದರಲ್ಲಿಯೂ ಮುಖ್ಯವಾಗಿ ಹಿಂದುಳಿದ ವರ್ಗದವರ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ವ್ಯಕ್ತಿಯಾಗಿದ್ದರು. ಅವರು ಹಿರಿಯ ಸದಸ್ಯರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸೇವಕರಾಗಿ ಹಾಗೂ ಶಾಸಕರಾಗಿ ದೊಡ್ಡ ಹಿರಿಮೆಯನ್ನು ಗಳಿಸಿಕೊಂಡಿದ್ದರು ರಾಜಕಾರಣಿಗಳಿಗೆ ಇರಬೇಕಾದ ಎಲ್ಲ ಗುಣಗಳೂ ಅವರಲ್ಲಿ ಇಂತಹ ಒಂದು ಕಳೆಪೆ ಕಾಲದಲ್ಲಿಯೂ ಇದ್ದವು ಹೀಗೆ ಅವರು ಒಳ್ಳೆಯ ಆದರ್ಶ ವ್ಯಕ್ತಿಯಾಗಿದ್ದರು ಮತ್ತು ಒಳ್ಳೆಯ ನೀತಿಗಳನ್ನು ಕಾಯ್ದುಕೊಂಡು ಬಂದಿದ್ದರು. ಅವರಿಗೆ ಇನ್ನಷ್ಟು ಸೇವೆ ಸಲ್ಲಿಸಬೇಕೆಂಬ ಆಸೆ ಇದ್ದರೂ ಸಹ ಅವರು ಈಗ ನಮ್ಮ ಮಧ್ಯೆ ಇಲ್ಲ. ಅವರ ಒಂದು ಆದರ್ಶಗಳನ್ನು ನಾವು ಅಳವಡಿಸಿಕೊಂಡರೆ ಅವರಿಗೆ ತಕ್ಕ ಗೌರವವನ್ನು ನಾವು ಸೂಚಿಸಿದಂತೆ ಆಗುತ್ತದೆ.

ಇನ್ನು ಶ್ರೀ ಡಿ. ರಾಜಗೋಪಾಲ್ ಅವರು ಒಳ್ಳೆಯ ತೀಕ್ಷ್ಣಮತಿಗಳಾಗಿದ್ದರು. ನಾನ ವಿಧಾನ ಪರಿಷತ್ತಿನ ಸದಸ್ಯನಾಗಿದಾಗ ಅವರ ಜೊತೆಯಲ್ಲಿ ಸಹ ಕೆಲಸ ಮಾಡಿದ್ದೇನೆ. ಕೆಲವು ಕಾಲ ನಾವುಗಳಿಬ್ಬರೂ ಸಹ ಒಂದು ಪಕ್ಷನಲ್ಲಿದ್ದುಕೊಂಡು ಜೊತೆಜೊತೆಯಾಗಿ ಕೆಲಸ ಮಾಡಿದ್ದೇವೆ. ಅವರು ಯಾವುದೇ ಒಂದು ವಿಚಾರ ತೆಗೆದುಕೊಂಡರೂ ಸಹ ಅದನ್ನು ಆಳವಾಗಿ ಅಭ್ಯಾಸ ಮಾಡಿ ಅವನ್ನು ಅತ್ಯಂತ ಪರಿಣಾಮಕಾರಿಯಾಗಿ ಮಂಡನೆ ಮಾಡತಕ್ಕ ಜಾಣತನ ಅವರಲ್ಲಿತ್ತು. ಅವರಲ್ಲಿ ಅಪಾರವಾದಂಥ ಸ್ಮರಣ ಶಕ್ತಿ ಇತ್ತು. ಅವರು ನೂರಕ್ಕೂ ಹೆಚ್ಚಿನ ಕಾರ್ಮಿಕ ಸಂಘಗಳಿಗೆ ಅಧ್ಯಕ್ಷರಾಗಿದ್ದರು. ಕಾರ್ಮಿಕರಿಗೆ ಸಂಬಂಧಪಟ್ಟ ಕಾನೂನುಗಳನ್ನು ಸಂಪೂರ್ಣವಾಗಿ ಹಾಗೂ ಆಳವಾಗಿ ಅಧ್ಯಯನ ಮಾಡಿ, ಆ ಕಾನೂನುಗಳನ್ನು ಸಂಪೂರ್ಣವಾಗಿ ಹಾಗೂ ಆಳವಾಗಿ ಅಧ್ಯಯನ ಮಾಡಿ, ಆ ಕಾನೂನುಗಳನ್ನು ಆಚರಣೆಯಲ್ಲಿ ತರುವುದರ ಬಗ್ಗೆ ಅವರು

ಕಾರ್ಮಿಕರಿಗೆ ಒಳ್ಳೆಯ ಮಾರ್ಗದರ್ಶನ ನೀಡುತ್ತಿದ್ದರು. ಇಂತಹ ಮಹಾನಾಯಕರು ಇವೊತ್ತು ನಮ್ಮ ಮಧ್ಯದಲ್ಲಿ ಇಲ್ಲ. ಅವರ ಮರಣದಿಂದ ಕರ್ನಾಟಕ ರಾಜ್ಯದ ಕಾರ್ಮಿಕ ವರ್ಗ ಒಬ್ಬ ಆತ್ಮೀಯ ಗೆಳೆಯನನ್ನು ಹಾಗೂ ಕಾರ್ಮಿಕ ಮುಖಂಡರೊಬ್ಬರನ್ನು ಕಳೆದುಕೊಂಡಿದೆ ಎಂದು ಹೇಳಬಹುದು. ಇವರಂತೆಯೇ ನನಗೆ ಮಾನ್ಯ ಬಿ. ಚೆನ್ನಬೈರೇಗೌಡರ ಬಗ್ಗೆಯೂ ಸಹ ಒಳ್ಳೆಯ ಪರಿಚಯವಿತ್ತು. ಮಾನ್ಯ ಅರ್ಥಮಂತ್ರಿಗಳು ಹೇಳಿದಂತೆ ಮಾನ್ಯ ಚೆನ್ನಬೈರೇಗೌಡರು ಎಲ್ಲಿಯೇ ಇರಲಿ, ಅವರನ್ನು ಗುರುತು ಮಾಡುವುದು ಬಹಳ ಸುಲಭದ ಕೆಲಸವಾಗಿತ್ತು. ಅವರು ಒಂದು ಸಲ ನೋಡಿದರೆ ಸಾಕು, ಯಾವಾಗಲೂ ನೆನಪಿನಲ್ಲಿ ಉಳಿಯುವಂತಹ ವ್ಯಕ್ತಿಯಾಗಿದ್ದರು. ಅವರ ಮೈಸೂರು ಪೇಟೆ ಇಡೀ ರಾಜ್ಯದ ಜನತೆಗೆ ಪರಿಚಾಯಂವಾಗಿತ್ತು. ಶ್ರೀಮಾನ್ ಚೆನ್ನಬೈರೇಗೌಡರಲ್ಲಿ ಎದ್ದು ಕಾಣತಕ್ಕಂಥ ಅನೇಕ ಗುಣಗಳಿದ್ದವು. ಒಳ್ಳೆಯ ಆದರ್ಶ ವ್ಯಕ್ತಿಯಾಗಿದ್ದರು. ಸಮಾಜದಲ್ಲಿ ರಾಜಕಾರಣಿಗಳಿಗೆ ಇರಬೆಕಾದಂಥ ಎಲ್ಲ ಗುಣಗಳಿದ್ದವು. ಎಂತಹ ಪ್ರಶ್ನೆಗಳೇ ಇರಲಿ, ಅಂದರೆ ಶಿಕ್ಷಣ ಸಮಸ್ಯೆ ಇರಲಿ ಕಾರ್ಮಿಕ ಸಮಸ್ಯೆ ಇರಲಿ ಅಥವಾ ನಮ್ಮ ಸಮಾಜದ ಬೇರೆ ಯಾವುದೇ ಸಮಸ್ಯೆ ಇರಲಿ, ಆ ಸಮಸ್ಯೆಗಳನ್ನು ಇವರು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡು, ಆ ಬಗ್ಗೆ ಜನರ ಮನವೊಲಿಸಿ, ಜನರನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುವಂತಹ ಶಕ್ತಿ ಇವರಲ್ಲಿತ್ತು. ಅವರನ್ನು ಯಾವಾಗ ಭೇಟಿ ಮಾಡಿದರೂ ಸಹ ನಗು ನಗುತ್ತಾ ಸ್ವಾಗತ ಮಾಡುತ್ತಿದ್ದರು. ಶಾಸಕರಭವನದಲ್ಲಿ ಶ್ರೀ ಚೆನ್ನಬೈರೇಗೌಡರು ಇಲ್ಲದಿದ್ದಾಗ ಅದು ಹಾಳು ಎನ್ನುವ ರೀತಿಯಲ್ಲಿ ಕಾಣುತ್ತಿತ್ತು. ಅವರ ಹತ್ತಿರ ಶಾಸಕರೇ ಹೋಗಲಿ ಅಥವಾ ಬೇರೆ ಯಾರೇ ಹೋಗಲಿ, ಎಲ್ಲರೊಡನೆಯೂ ಸಲುಗೆಯಿಂದ ಮಾತನಾಡಿ ಎಲ್ಲರನ್ನೂ ಹುರಿದುಂಬಿಸತಕ್ಕಂಥ ವ್ಯಕ್ತಿಯಾಗಿದ್ದರು. ವಿಶೇಷವಾಗಿ ರೈತರ ಸಮಸ್ಯೆ ಬಂದಾಗ ಇವರು ತಮ್ಮ ನಿಲುವನ್ನು ಎಂದೂ ಬಿಟ್ಟುಕೊಡುತ್ತಿರಲಿಲ್ಲ. ರೈತರ ಏಳಿಗೆಗಾಗಿ ಮತ್ತು ಗ್ರಾಮಾಂತರ ಪ್ರದೇಶದ ಏಳಿಗೆಗಾಗಿ ಇವರು ಹೋರಾಟ ಮಾಡುತ್ತಿದ್ದರು.

ಅನೇಕ ವರ್ಷಗಳಿಂದ ರಾಜ್ಯದ ಜನತೆಗೆ ಅವರು ಸೇವೆ ಮಾಡಿದ್ದಾರೆ. ಅವರಿಗೆ ವಯಸ್ಸು ಹೆಚ್ಚಾಗಿದ್ದರೂ ಸಹ ಅವರ ಚಟುವಟಿಕೆ ಬಗ್ಗೆ ಮುಖದ ಮೇಲೆ ನೋಡಿದಾಗ ಇನ್ನೂ ಯುವಕರಾಗಿಯೇ ಕಾಣುತ್ತಾ ಇದ್ದರು. ಹಾಗೆ ಕಾಣುವುದಲ್ಲದೆ ಅವರ ಚಟುವಟಿಕೆಯೂ ಕೂಡ ಹಾಗೇ ಇತ್ತು. ಇದರ ಜೊತೆಗೆ ಅವರು ಶಿಕ್ಷಣ ಕ್ಷೇತ್ರದಲ್ಲೂ ಸಹ ಉನ್ನತ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಶಿಕ್ಷಣ ಸಂಸ್ಥೆಗಾಗಿ ಅದರ ಏಳಿಗೆಗಾಗಿ ಹಗಲಿರುಳೂ ದುಡಿಯುತ್ತಾ ಇದ್ದುದನ್ನು ನಾವು ನೋಡಿದ್ದೇವೆ. ಅವರು ಈವೊತ್ತು ಈ ಲೋಕವನ್ನು ಬಿಟ್ಟು ಹೋಗಿದ್ದಾರೆ. ಆದರೆ ಅವರು ಈ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಜನತೆಯಲ್ಲಿ ಬಿಟ್ಟು ಹೋಗಿರತಕ್ಕಂಥಾ ಸೇವೆಯನ್ನು ನಾವು ಅಳವಡಿಸಿಕೊಂಡರೆ, ನೆನೆಸಿಕೊಂಡರೆ ಅವರಿಗೆ ನಾವು ಒಂದು ಸ್ಮಾರಕವನ್ನು ಮಾಡಿದ ಹಾಗಾಗುತ್ತದೆ. ಇದಲ್ಲದೆ ಸಮಾಜ ಸೇವೆಯಲ್ಲೂ ಕೂಡ ಅದರ ಏಳಿಗೆಗಾಗಿ ದುಡಿಯುತ್ತಾ ಇದ್ದರು. ಆದಕ್ಕಾಗಿ ನಾವು ಅವರಿಗೆ ಗೌರವ ಸಲ್ಲಿಸುವುದಲ್ಲದೆ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ ಎಂದು ಹೇಳುತ್ತಾ ಅವರ ಕುಟುಂಬ ವರ್ಗದವರಿಗೆ ಆಗಿರತಕ್ಕಂಥಾ ಸಂತಾಪದಲ್ಲಿ ನಾನೂ ಕೂಡ ಪಾಲುಗೊಳ್ಳುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಶ್ರೀಮಾನ್ ಚೆನ್ನೆಬೈರೇಗೌಡರು ಮತ್ತು ಶ್ರೀಮಾನ್ ಡಿ. ರಾಜಗೋಪಾಲ್‌ರವರು ಇಬ್ಬರೂ ಕೂಡ ನನಗೆ ಬಹಳ ಚೆನ್ನಾಗಿ ಗೊತ್ತಿದೆ. ಅವರು ಈವೊತ್ತಿನ ದಿವಸ ಈ ಲೋಕವನ್ನು ತ್ಯಜಿಸಿದ್ದಾರೆ. ಶ್ರೀಮಾನ್ ಚೆನ್ನಬೈರೇಗೌಡರ ಬಗ್ಗೆ ಹೇಳುವುದಾದರೆ ಅವರು ನನಗೆ ಬಹಳ ವರ್ಷಗಳಿಂದಲೂ ಗೊತ್ತು. ಅವರು ನನ್ನನ್ನು ಒಂದು ಸಲ ಹೊಸಕೋಟೆ ತಾಲ್ಲೂಕಿಗೆ ಭಾಷಣಕ್ಕೆ ಕರೆದುಕೊಂಡು ಹೋಗಿದ್ದರು. ಆವಾಗ ನನಗೆ ಚೆನ್ನಾಗಿ ಅರಿವಾಯಿತು. ಅವರು ಹಿಂದುಳಿದ ವರ್ಗದವರಿಗೆ, ರೈತ ವರ್ಗದವರಿಗೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅದರಲ್ಲೂ ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಗೌರವ ಸ್ಥಾನ ಕೊಟ್ಟು ಮಹತ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ. ಆದುದರಿಂದ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ಎರಡನೆಯದಾಗಿ ಶ್ರೀಮಾನ್ ಡಿ. ರಾಜಗೋಪಾಲ್‌ರವರ ಬಗ್ಗೆ ಹೇಳಬೇಕಾದರೆ ಅವರ ಪರಿಚಯ ನನಗೆ ಆದದ್ದು ೧೦ ವರ್ಷದಿಂದ. ಅವರು ಕಾರ್ಮಿಕ ನಾಯಕರಾಗಿ ನೂರಾರು ಸಂಘ

ಸಂಸ್ಥೆಯ ಅಧ್ಯಕ್ಷರಾಗಿದ್ದರು. ಮತ್ತು ಕಾನೂನು ಸಲಹೆಗಾರರೂ ಸಹ ಆಗಿದ್ದರು. ನಾನು ಸಹ ಕಾನೂನು ಸಲಹೆಗಾರನಾಗಿದ್ದೆ, ಒಂದು ಸಲ ಕಾನೂನು ಸಲಹೆಗಾಗಿ ನಾನೂ ಅವರೂ ಕೂಡ ಜೊತೆ ಗೂಡಿ ಕೆಲಸ ಮಾಡಿದ್ದೇವೆ. ಭಾರತದಲ್ಲಿ ಇಂತಹ ಕಾರ್ಮಿಕವರ್ಗದ ನಾಯಕರು ಸಿಗುವುದು ಬಹಳ ಅಪರೂಪ. ಅವರು ಸಾಮಾನ್ಯ ಕಾರ್ಮಿಕರಾಗಿದ್ದು, ಕಾರ್ಮಿಕರಾಗಿ ಕೆಲಸ ಮಾಡಿ ನಂತರ ಕಾರ್ಮಿಕ ನಾಯಕರಾದರು. ಯಾರೇ ಆಗಲಿ ವರ್ಕಿಂಗ್ ಕ್ಲಾಸ್ ನಲ್ಲೇ ಇದ್ದು ಅವರಲ್ಲೇ ಹೋರಾಡಿ ಅಂಥಾವರವು ಕಾರ್ಮಿಕ ನಾಯಕರಾಗಿ ಬರುವುದು ಸಮ್ಮ ಭಾರತದಲ್ಲಿ ಸಾಕಷ್ಟು ಸಿಗುವುದಿಲ್ಲ. ಇಂಥಾವರ್ಗಕ್ಕೆ ಸೇರಿದವರು ಶ್ರೀಮಾನ್ ಡಿ. ರಾಜಗೋಪಾಲ್‌ರವರು ಮಾತ್ರ. ಅವರು ಕಾರ್ಮಿಕರಾಗಿ ಕೆಲಸ ಮಾಡಿ ಹಗಲಿರುಳೂ ದುಡಿದು ಕಾರ್ಮಿಕ ನಾಯಕರಾಗಿ ಭಾರತದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ್ದಾರೆ. ಈ ರೀತಿ ಇರುವವರು ಅತಿ ವಿರಳ. ಇವರು ಇಂಥಾ ಒಂದು ಉನ್ನತ ಸ್ಥಾನವನ್ನು ಪಡೆದಿರುವಂಥಾ ವಿಶೇಷ ವ್ಯಕ್ತಿಯಾಗಿದ್ದರು, ಕಾರ್ಮಿಕರ ಕಷ್ಟವನ್ನು ಚೆನ್ನಾಗಿ ಅರಿತುಕೊಂಡು ಅವರ ಏಳಿಗೆಗಾಗಿ ಹಗಲಿರುಳೂ ದುಡಿದು ಚೆನ್ನಾಗಿ ಕೆಲಸ ಮಾಡಿದವರು ಇವರೊಬ್ಬರೆ. ಇವರು ಕಾರ್ಮಿಕರಾಗಿ ದುಡಿದ್ದರಿಂದ ಕಾರ್ಮಿಕರ ಹಿತವನ್ನೂ ಅರಿತು ಕೊಂಡು ಇದರ ಜೊತೆಗೆ ಕಾರ್ಮಿಕ ನಾಯಕರಾದುದರಿಂದ ರಾಷ್ಟ್ರದ ಹಿತವನ್ನೂ ಸಹ ಅರಿತುಕೊಂಡು ಚೆನ್ನಾಗಿ ಕೆಲಸ ಮಾಡಿದ್ದಾರೆ. ಈ ಹಾದಿಯಲ್ಲಿ ಹೋದರೆ ಇಬ್ಬರ ಹಿತವು ಕೂಡ ಚೆನ್ನಾಗಿ ಹೋಗುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಈವೊತ್ತಿನ ದಿವಸ ಬಹು ಕಾರ್ಮಿಕ ನಾಯಕರು ದೇಶದ ಹಿತಕ್ಕೆ ಲಕ್ಷ್ಯ ಕೊಡುವುದಿಲ್ಲ. ಆದ್ದರಿಂದ ಬಹುತೇಕ ಕಾರ್ಮಿಕರು ಈ ದಿನ ಬಹಳ ಕಷ್ಟಕ್ಕೆ ಒಳಗಾಗಿದ್ದಾರೆ. ಕಾರ್ಮಿಕರ ಬಗ್ಗೆ ಅವರ ಹಿತವನ್ನು ಕಾಪಾಡುತ್ತೇವೆಂದು ಹೋರಾಟ ಮಾಡಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾರೆ. ಅಂಥಾವರೇ ಬಹಳ ಜಾಸ್ತಿ ಇದ್ದಾರೆ. ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಈ ಒಂದು ಕಾರ್ಮಿಕ ಕ್ಷೇತ್ರದ ಸಂಘಟನೆಗೆ, ಅವರ ಏಳಿಗೆಗೆ ಶ್ರೀಮಾನ್ ಡಿ. ರಾಜಗೋಪಾಲ್‌ರವರು ಯಾವರೀತಿಯಾಗಿ ಒಂದು ಆದರ್ಶವನ್ನು ತೋರಿಸಿ ಬಿಟ್ಟು ಹೋಗಿದ್ದಾರೋ ಆದೇರೀತಿಯಲ್ಲಿ ನಡೆಯುವುದಾದರೆ ಅನುಕೂಲ. National interest and the working class interest should go together. Then only we can aspire and see the welfare of working class and the nation. ಈ ಒಂದು ಮನೋಭಾವನೆಯ ಹಾದಿಯನ್ನು ಹೊಂದಿದಂಥ ವ್ಯಕ್ತಿ ಇವರಾಗಿದ್ದರು. ಇಂಥಾವರು ಇಂದು ನಮ್ಮ ಮುಂದೆ ಇಲ್ಲ. ಇದರಿಂದ ಈ ಜನತೆಗೆ ತುಂಬಾರಾದೇ ಹಾನಿಯಾಗಿದೆ. ಅವರು ತಮ್ಮ ಆದರ್ಶವನ್ನು ಏನಂ ಬಿಟ್ಟು ಹೋಗಿದ್ದಾರೋ ಅದನ್ನು ಅನುಸರಿಸಿದರೆ ಅನುಕೂಲವಾಗುತ್ತದೆ. ಈವೊತ್ತಿನ ದಿವಸ ನಮ್ಮನ್ನು ಅಗಲಿ ಹೋದ ಈ ನಾಯಕರಿಗೆ ಚಿರಶಾಂತಿಯನ್ನು ಕೋರಿ ಅವರ ಆತ್ಮಕ್ಕೆ ಶಾಂತಿಯನ್ನು ಭಗವಂತನು ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ಒಂದು ಸಂತಾಪ ಸೂಚಕ ನಿರ್ಣಯದಲ್ಲಿ ಒಂದು ಚ್ಯುತಿ ಆಗಿದೆ. ಈ ಒಂದು ಸಂದರ್ಭದಲ್ಲಿ ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಏನು ಪ್ರಸ್ತಾಪ ಮಾಡಿದರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ದಿವಂಗತ ಸಿ ಟಿ ಹನುಮಂತಯ್ಯ ನವರು ನನಗೂ ಸಹ ಪರಿಚಯದಂಥ ವ್ಯಕ್ತಿ. ಅವರು ೧೯೪೧-೪೫ ಮತ್ತು ೧೯೪೫-೪೯ರವರೆಗೆ ಹಿಂದಿನ ಮೈಸೂರು ರೆಪ್ರೆಸೆಂಟಿಟೀವ್ ಅಸೆಂಬ್ಲಿಯ ಸದಸ್ಯರಾಗಿದ್ದರು, ನಂತರ ೧೯೫೨ ರಿಂದ ೧೯೫೭ರ ವರೆಗೆ ಪಾವಗಡ-ಮಧುಗಿರಿ ಕ್ಷೇತ್ರದಿಂದ ಆರಿಸಿ ಬಂದ ಸದಸ್ಯರಾಗಿದ್ದರು. ಅಷ್ಟೇ ಅಲ್ಲ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟಕ್ಕಾಗಿ ಮಾಡಿದ್ದುದು ಎಲ್ಲರಿಗೂ ಗೊತ್ತಿದೆ. ಅಲ್ಲದೆ ಅವರು ಎಲ್ಲರಿಗೂ ಪರಿಚಾಯವಾದ ವ್ಯಕ್ತಿ. ಈ ಒಂದು ವಿಷಯ ನಾನು ಬಿಟ್ಟುಬಿಟ್ಟಿದ್ದೆ, ಈ ಒಂದು ಚ್ಯುತಿಗೆ ನಾನು ವಿಶಾದಪಡುತ್ತೇನೆ. ಈ ಸಂದರ್ಭದಲ್ಲಿ ಈ ಸಭೆಯ ಮುಂದಿರುವ ಸಂತಾಪ ಸೂಚಕ ನಿರ್ಣಯದಲ್ಲಿ ಅವರ ಹೆಸರನ್ನು ಈಗ ಸೇರಿಸುತ್ತೇನೆ.

I am sure the House will join me in expressing our sense ofsorrow at the passing away of Sriyuths K. Venkataramaiah, D. Rajagopal, H. R. T. Rajagopal Mudaliar, K. L. Narasimhaiah, B. D. Naik,

P. W. Swami Dorai, B. Channabyregowda, K. Siddaiah, Dr. A. R. Karisiddappa, R. Muniswamaiah B.C. Nanjundaiya, and C.T. Hanumanthiah.

I request the Members to stand in silence for a minute as a mark of respect to the memory of the departed.

(*The House stood in silence for a minute as a mark of respect to the memory of the departed*

MR. SPEAKER.---Now, the House stands adjourned to meet again tomorrow at 9-00 A.M.

The House adjourned at Twenty Seven Minutes past One of the Clock to meet again at Nine of the Clock on Saturday the 30th January 1982.